ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ೩೭೪೪೪ ಜನರು ಮತ್ತು ವಿಸ್ತೀರ್ಣ ೧೦೫೭೫೮ ಎಕರೆ ೧೧ ಗುಂಟೆಗಳು.

ಈ) ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸಲು ಅನುಕೂಲವಾಗುವಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಕಲಂ ೯೪ಕ್ಕೆ ಸೂಕ್ತ ತಿದ್ದುಪಡಿಯನ್ನು ತರಲಾಗಿದ್ದು, ಅದರಂತೆ ಸಕ್ರಮಗೊಳಿಸಲು ತಾಲ್ಲೂಕು ಮಟ್ಟದ ಸಮಿತಿಯು ಸಮ ಪ್ರಾಧಿಕಾರವುಳ್ಳದ್ದಾಗಿರುತ್ತದೆ. ಸಕ್ರಮಗೊಳಿಸುವ ಅರ್ಜಿಗಳು ತಾಲ್ಲೂಕು ಮಟ್ಟದ ಸಮಿತಿಗಳ ಮುಂದೆ ಇದ್ದು ಸದರಿ ಅರ್ಜಿಗಳನ್ನು ವಿಲೇವಾರಿ ಮಾಡಲು ಸಮಿತಿಯ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಚಿತ್ರದುರ್ಗ ಜಿಲ್ಲೆಯಲ್ಲಿ ದರಖಾಸ್ತದಾರರ ಸಂಖ್ಯೆ.

೧೩೧೪(೧೪೩೫)ಶ್ರೀ ಎನ್. ಜಿ. ನಾಯ್ಕ್ (ಮೊಳಕಾಲ್ಮೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ದರಖಾಸ್ತುದಾರರ ಸಂಖ್ಯೆ ಎಷ್ಟು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಮಂಜೂರಾಗಿದೆ?

ಆ) ಈ ಆಜ್ಞೆ ದರಖಾಸ್ತುದಾರರು ಹೊಂದಿರುವ ಆಜ್ಞೆ ಜಮೀನನ್ನು ಅವರಿಗೆ ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೧೦೪೬೪೨೬ ಅರ್ಜಿಗಳು, ಅವುಗಳಲ್ಲಿ ೬೪೪೭೮ ಅರ್ಜಿಗಳು ಚಿತ್ರದುರ್ಗ ಜಿಲ್ಲೆಯಿಂದ ಬಂದಿರುತ್ತವೆ. ಭೂ ಸಕ್ರಮೀಕರಣ ಯೋಜನೆಯಡಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಈಗಾಗಲೇ ೧೪೩ ಜನ ಅರ್ಜಿದಾರರಿಗೆ ಜಮೀನನ್ನು ಮಂಜೂರು ಮಾಡಲಾಗಿದೆ.

ಆ) ಪ್ರಸ್ತುತದಲ್ಲಿ ಅರ್ಜಿಗಳನ್ನು ತಾಲ್ಲೂಕು ಮಟ್ಟದಲ್ಲಿರುವ ಸಮಿತಿಗಳು ಪರಿಶೀಲಿಸುತ್ತಿವೆ. ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸಲು ಭೂ ಸಕ್ರಮೀಕರಣ ಯೋಜನೆಯಡಿಯಲ್ಲಿ ಸಮಿತಿಯು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವುದು.

ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ರಸ್ತೆ ಹೆದ್ದಾರಿಗಳಲ್ಲಿ ಬೇವಿನ ಗಿಡ, ಹುಣಸೇಗಿಡ ಇತ್ಯಾದಿ ಬೆಳೆಸುವುದು.

೧೩೧೫(೧೯೧೭)ಶ್ರೀ ಎಂ. ಸಿ. ಕುನ್ನೂರ (ಶಿಗ್ಗಾಂವ್):- ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ರಾಷ್ಟ್ರೀಯ ಹೆದ್ದಾರಿಗಳ ಮತ್ತು ರಾಜ್ಯ ರಸ್ತೆಯ ಬದಿಯಲ್ಲಿ ನೀಲಗಿರಿ ಗಿಡ ಹಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ರಸ್ತೆಗಳ ಬದಿಯಲ್ಲಿ ಬೇವಿನ ಗಿಡ, ಹುಣಸೆ ಗಿಡ, ಮಾವಿನ ಗಿಡ, ನೀಲಗಿರಿ ಗಿಡ, ಇತ್ಯಾದಿ ಹಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ನೀಲಗಿರಿ ಗಿಡ ಹಚ್ಚುವುದರಿಂದ ಅಪಾಯವೆಂದು ಸಾರ್ವಜನಿಕರಿಂದ ದೂರು

ಬಂದಿರುವುದು ನಿಜವಲ್ಲವೇ? ಹಾಗಿದ್ದಲ್ಲಿ; ಈ ಬಗ್ಗೆ ತಜ್ಞರ ಅಭಿಪ್ರಾಯ ಸಂಗ್ರಹಿಸಲಾಗಿದೆಯೇ?

ಶ್ರೀ ಈಟಿ ಶಂಭುನಾಥ (ಅರಣ್ಯ ಸಚಿವರು):-

ಅ) ಇಲ್ಲ.

ಆ) ಹೌದು

ಇ) ನಿಜ. ಈ ಸಂಬಂಧ ತಜ್ಞರ ಅಭಿಪ್ರಾಯ ಪಡೆಯಲಾಗಿದ್ದು, ಅದರ ಅಭಿಪ್ರಾಯದಂತೆ ನೀಲಗಿರಿ ಬೆಳೆಸುವುದು ಅಪಾಯಕಾರಿ ಎಂಬುದು ದೃಢಪಟ್ಟಿಲ್ಲ.

ಬಂಗಾರುಪೇಟೆ ತಾಲ್ಲೂಕಿನ ಉಪನೋಂದಣಿ ಕಛೇರಿ ಬಗ್ಗೆ.

೧೩೧೬(೨೦೦೦)ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯ ಬಂಗಾರುಪೇಟೆ ತಾಲ್ಲೂಕಿನಲ್ಲಿ ಎಷ್ಟು ಉಪ-ನೋಂದಣಿ ಕಛೇರಿಗಳಿವೆ?

ಆ) ೧೯೯೯ ಜನವರಿಯಿಂದ ೧೯೯೧ರ ಡಿಸೆಂಬರ್ ಅಂತ್ಯದವರೆಗೆ ನೋಂದಾಯಿಸಲಾಗಿರುವ ಖಾಲಿ ಜಾಗಗಳು, ಮನೆಗಳು, ಕೃಷಿ ಜಮೀನು ಎಷ್ಟು?

ಇ) ಮೇಲೆ ಹೇಳಿದ ಅವಧಿಯಲ್ಲಿ ಈ ಉಪನೋಂದಣಿ ಕಛೇರಿಯಲ್ಲಿ ಆಸ್ತಿ ಅಪಮೌಲ್ಯಗೊಳಿಸಿ ದಾಖಲಿಸಿದ ಪತ್ತೆ ಮಾಡಿದ ದಸ್ತಾವೇಜುಗಳ ಸಂಖ್ಯೆ ಎಷ್ಟು?

ಈ) ಈ ರೀತಿ ಅಪಮೌಲ್ಯಗೊಳಿಸಿ ನೋಂದಾಯಿಸಿರುವುದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಉ) ಕಟ್ಟಡಗಳು ಇಲ್ಲದಿದ್ದರೂ, ಕಟ್ಟಡಗಳು ಇದೆ ಎಂದು ಘೋಷಿಸಿ ನೋಂದಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಒಂದು

ಆ) ನೋಂದಾಯಿಸಲಾಗಿರುವ ಖಾಲಿ ಜಾಗಗಳು ೩೪೪೧, ಮನೆಗಳು ೫೮೬, ಕೃಷಿಜಮೀನುಗಳು ೦೦೩೩ ಒಟ್ಟು ೧೨೧೧೦.

ಇ) ೩೧೫ ಪ್ರಕರಣಗಳು.

ಈ) ಇಂತಹ ಪ್ರಕರಣಗಳಲ್ಲಿ ಕರ್ನಾಟಕ ಮುದ್ರಾಂಕ ಅಧಿನಿಯಮದ ಸೆಕ್ಷನ್ ೪೫-ಎ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಪರಿವಿಧಿಯನ್ನು ರಾಜ್ಯದಾದ್ಯಂತ ವಿಸ್ತರಿಸಿರುವುದರಿಂದ ಅಪಮೌಲ್ಯವನ್ನು ತಪ್ಪಿಸಬಹುದು.

ಉ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.